ದಿನಾಂಕಃ11.04.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ.ಎಸ್.ಜಿ. ವಕೀಲರಿಂದ:**

ನನಗೆ ಐದು ಜನ ಮಕ್ಕಳು, ಅದರಲ್ಲಿ ಎರಡು ಹೆಣ್ಣುಮಕ್ಕಳು ಮತ್ತು ಮೂರು ಗಂಡುಮಕ್ಕಳು. ಎಲ್ಲಾ ಮಕ್ಕಳ ಮದುವೆಯಾಗಿರುತ್ತದೆ. ನನ್ನ ಮಕ್ಕಳ ಮದುವೆಯನ್ನು ನಾನೇ ಮುಂದೆ ನಿಂತು ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡುಮಕ್ಕಳ ಮದುವೆ ಯಾವ ಇಸವಿಯಲ್ಲಿ ನಡೆದಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಯಜಮಾನರ ಮರಣದ ದಿನಾಂಕ ನನಗೆ ತಿಳಿದಿರುವುದಿಲ್ಲ. ದಾವ ಸ್ವತ್ತಿನ ಸ.ನಂ.74/3 ಮತ್ತು 74/5 ಎಂದು ಯಾವಾಗ ಪೋಡಿಯಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ನಮ್ಮ ಯಜಮಾನರು ಅವರ ಆಸ್ತಿಯಲ್ಲಿ ಯಾವುದೇ ವಿಭಜನೆ ಮಾಡಿರುವುದಿಲ್ಲ. ದಾವ ಹೂಡುವ ಸಂದರ್ಭದಲ್ಲಿ ದಾವಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ನನ್ನ ಮಗನಾದ ಸತ್ಯನಾರಾಯಣ ನಮ್ಮ ವಕೀಲರಿಗೆ ತಿಳಿಸಿರುತ್ತಾರೆ. ವಾದಪತ್ರದಲ್ಲಿ ಯಾವ ಅಂಶಗಳನ್ನು ನಮೂದಿಸಲಾಗಿರುತ್ತದೆ ಎಂದು ನನಗೆ ತಿಳಿಸಲಾಗಿರುವುದಿಲ್ಲ. ದಾವ ಹೂಡುವ ಸಂದರ್ಭದಲ್ಲಿ ನಿಮ್ಮ ಮಗ ನಮ್ಮಗಳ ನಡುವೆ ಈಗಾಗಲೇ ವಿಭಜನೆಯಾಗಿದೆ ಎಂದು ನಮೂದಿಸಿದ್ದಾರೆ ಎಂದರೆ ಸಾಕ್ಷಿಯು ದಾವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ವಿಭಜನೆ ನಮ್ಮಗಳ ನಡುವೆ ಆಗಿರುವುದಿಲ್ಲ.

ಈ ದಾವ ಪತ್ರದಲ್ಲಿ ನಮ್ಮಗಳ ನಡುವೆ ವಿಭಜನೆಯಾಗಿದೆ ಮತ್ತು ಅದು ನೋಂದಣಿಯೂ ಆಗಿದೆ ಎಂದು ಬರೆದಿರುವುದು ಸರಿಯಲ್ಲ. ದಾವ ಸ್ವತ್ತಾದ ಸ.ನಂ.74 ರ ಸ್ವತ್ತು ನನ್ನ ಯಜಮಾನರಿಗೆ ಯಾವುದರ ಮುಖಾಂತರ ಬಂದಿತ್ತು ಎಂದು ಹೇಳಲು ಸಾಧ್ಯವಿಲ್ಲ. ನನ್ನ ಯಜಮಾನರು ಮರಣಹೊಂದುವ ಪೂರ್ವದಲ್ಲಿ ನಾನು ಮತ್ತು ನಮ್ಮ ಯಜಮಾನರು ನನ್ನ ದೊಡ್ಡಮಗನಾದ ಪೂರ್ಣೇಶ್ ಎಂಬುವವರ ಜೊತೆ ವಾಸಿಸುತ್ತಿದ್ದೆವು. ನಮ್ಮ ಯಜಮಾನರು ಮರಣಹೊಂದುವ ಪೂರ್ವದಿಂದಲೂ ನಾವು ಪೂರ್ಣೇಶ್ ರವರ ಜೊತೆಯೇ ವಾಸಿಸುತ್ತಿದ್ದೆವು. ನನ್ನ ದೊಡ್ಡಮಗನಾದ ಪೂರ್ಣೇಶ್ ನಿವೃತ್ತಿ ಹೊಂದುವ ಮೊದಲು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. ನನ್ನ ಮಗ ಪೂರ್ಣೇಶ್ ಮದುವೆಯಾದ ನಂತರ ಕುಟುಂಬ ಸಮೇತರಾಗಿ ಬೆಂಗಳೂರಿನಲ್ಲೇ ವಾಸಿಸುತ್ತಿದ್ದರು. ನಿವೃತ್ತಿ ಹೊಂದಿದ ನಂತರ ಕುಟುಂಬ ಸಮೇತರಾಗಿ ತಮ್ಮ ಊರಿಗೆ ಹಿಂದಿರುಗಿರುತ್ತಾರೆ. ನನ್ನ ಮಗ ಪೂರ್ಣೇಶ್ ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ಸಮಯದಲ್ಲಿ ಅವರ ಪತ್ನಿ ನನ್ನ ಜೊತೆ ಊರಿನಲ್ಲಿ ಇದ್ದರು ಎಂದರೆ ಸರಿ. ನಾನು ಹಳೇ ಮನೆಯಲ್ಲಿಯೇ ವಾಸಿಸುತ್ತಿರುತ್ತೇನೆ.

ಅದೇ ಹಳೇ ಮನೆಯಲ್ಲಿ ಈ ದಾವೆಯಲ್ಲಿ ಇರುವ ಪ್ರತಿವಾದಿಯು ವಾಸಿಸುತ್ತಿದ್ದರು ಎಂದರೆ ಸಾಕ್ಷಿಯು ಹೌದು ಆದರೆ ಪ್ರಸ್ತುತವಾಗಿ ಬೇರೆ ಮನೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಇರುವ ಪ್ರತಿವಾದಿಯು ವಾಸಿಸುತ್ತಿದ್ದ ಹಳೇ ಮನೆಯು ದಾವ ಸ್ವತ್ತಿನ ಒಳಗೆ ಇರುತ್ತದೆ ಎಂದರೆ ಸರಿ. ಪೂರ್ಣೇಶ್ ರವರು ಹೊಸಮನೆಯನ್ನು ನಿರ್ಮಿಸುತ್ತಿರುವ ಕಾರಣ ಅವರು

ಬೇರೊಂದು ಮನೆಯಲ್ಲಿ ನೆಲೆಸಿರುತ್ತಾರೆ, ಆದರೆ ಹಳೇ ಮನೆಯಲ್ಲಿ ನಮ್ಮೊಟ್ಟಿಗೆ ವಾಸಿಸುತ್ತಿರುವುದಿಲ್ಲ. ಪ್ರತಿವಾದಿಯು ಸಹಾ ಹಳೇ ಮನೆಯನ್ನೇ ಕೆಡವಿ ಹೊಸಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿ. ಪ್ರಸ್ತುತವಾಗಿ ಯಾವುದೇ ಹಳೇ ಮನೆ ಇರುವುದಿಲ್ಲ ಅದನ್ನು ಪೂರ್ಣೇಶ್ ರವರು ಕೆಡವಿ ಹೊಸಮನೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ಪೂರ್ಣೇಶ್ ರವರು ಹಳೇ ಮನೆಯನ್ನು ಕೆಡವಿದ ಸಮಯದಲ್ಲಿ ನೀವು ಯಾರ ಜೊತೆ ವಾಸಿಸುತ್ತಿದ್ದೀರಿ ಎಂದರೆ ಸಾಕ್ಷಿಯು ನನ್ನ ಇನ್ನೊಬ್ಬ ಮಗನಾದ ಸತ್ಯನಾರಾಯಣ ಎಂಬುವವರ ಜೊತೆ ವಾಸಿಸುತ್ತಿದ್ದೆ ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆಯ ದಾವ ಸ್ವತ್ತಿನ ಮೇಲೆ ಯಾರು ಸಾಲವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಈ ದಾವೆಯಲ್ಲಿ ಇರುವ ಪ್ರತಿವಾದಿಯಾದ ರವೀಂದ್ರ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯು ಬ್ಯಾಂಕಿನಲ್ಲಿ ದಾವ ಸ್ವತ್ತಿನ ಮೇಲೆ ಸಾಲ ಪಡೆದಿರುತ್ತಾರೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಮಾಡಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿ ಇರುವ ಪ್ರತಿವಾದಿಯು ದಾವ ಸ್ವತ್ತಿನ ಮೇಲೆ ಸುಮಾರು 15 ವರ್ಷಗಳ ಹಿಂದೆಯೇ ಸಾಲವನ್ನು ಪಡೆದಿರುತ್ತಾರೆ. ಸದರಿ ಸಾಲ ಪಡೆಯಲು ನೀವು ಯಾವುದಾದರೂ ದಾಖಲಾತಿಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಪ್ರತಿವಾದಿಯಾದ ನನ್ನ ಮಗನಾದ ರವೀಂದ್ರ ರವರ ಮಾತಿನ ಮೇರೆಗೆ ಬ್ಯಾಂಕಿನಲ್ಲಿ ಒಂದು ದಾಖಲಾತಿಯ ಮೇಲೆ ಸಹಿಯನ್ನು ಮಾಡಿರುತ್ತೇನೆ. ನಾನು ಪ್ರತಿವಾದಿಯ ಬಳಿ ಈ ರುಜುವನ್ನು ಯಾವುದರ ವಿಷಯಕ್ಕೆ ಕುರಿತು ಪಡೆಯುತ್ತಿದ್ದೀರ ಎಂದು ಕೇಳಿರುವುದಿಲ್ಲ. ನಾನು ಯಾವ ಬ್ಯಾಂಕಿಗೆ ತೆರಳಿ ಸಹಿಯನ್ನು ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ.

15 ವರ್ಷಗಳ ಹಿಂದೆ ದಾವ ಸ್ವತ್ತುಗಳು ನನ್ನ ಯಜಮಾನರ ಹೆಸರಿನಲ್ಲಿರುತ್ತದೆ. ನನ್ನ ಯಜಮಾನರು ತೀರಿಕೊಂಡ ನಂತರ ದಾವ ಸ್ವತ್ತುಗಳು ನನ್ನ ಹೆಸರಿಗೆ ಬಂದಿರುತ್ತದೆ. ನಮ್ಮ ಹೆಸರಿನಲ್ಲಿರುವ ಸ್ವತ್ತುಗಳ ಮೇಲೆ ಇನ್ನೊಬ್ಬರು ಸಾಲ ಪಡೆಯಲು ಸಾಧ್ಯವಿಲ್ಲ ಎಂದರೆ ಸರಿ. ನಾನು ರವೀಂದ್ರ ರವರೊಟ್ಟಿಗೆ ವಾಸಿಸುತ್ತಿದ್ದೆ ಅವರು ಹಳೇ ಮನೆಯನ್ನು ಕೆಡವಿ ಹೊಸಮನೆಯನ್ನು ನಿರ್ಮಿಸಲು ಪ್ರಾರಂಭಿಸಿದಾಗ ನಾನು ಸತ್ಯನಾರಾಯಣರವರ ಜೊತೆ ವಾಸಿಸಲು ಪ್ರಾರಂಭಿಸುತ್ತೇನೆ ಎಂದರೆ ಸಾಕ್ಷಿಯು 6 ತಿಂಗಳ ಹಿಂದಿನಿಂದ ನಾನು ಸತ್ಯನಾರಾಯಣರವರ ಜೊತೆಗೆ ವಾಸಿಸಲು ಪ್ರಾರಂಭಿಸಿದ್ದೇನೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನ ವಿಸ್ತೀರ್ಣ ಎಷ್ಟಿದೆ ಎಂದರೆ ಕೇವಲ 15 ಗುಂಟೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯೊಂದಿಗೆ ವಾಸಿಸುತ್ತಿದ್ದೆ ಅವರ ಮೇಲಿನ ಪ್ರೀತಿಯಿಂದ ನಾನು ಪ್ರತಿವಾದಿಯ ಹೆಸರಿಗೆ ದಾವ ಸ್ವತ್ತಿಗೆ ಸಂಬಂಧಿಸಿದಂತೆ ದಾನಪತ್ರವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾನಪತ್ರಕ್ಕೆ ಪ್ರತಿವಾದಿಯು ನನ್ನ ಕಿವಿ ಚಿಕಿತ್ಸೆಗೆ ಸಂಬಂಧಿಸಿದಂತೆ ವೈದ್ಯರ ಬಳಿ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಯಾವುದೋ ಒಂದು ಕಚೇರಿಗೆ ಕರೆದುಕೊಂಡು ಹೋಗಿ ನಾನು ಸಾಲವನ್ನು ಮಾಡಿದ್ದೇನೆ ಎಂದು ಹೇಳಿ ಒಂದು ದಾಖಲಾತಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ.

ಸದರಿ ಕಚೇರಿಯಲ್ಲಿ ಪತ್ರಕ್ಕೆ ಸಹಿ ಪಡೆದ ನಂತರ ಯಾವುದೇ ಭಾವಚಿತ್ರವನ್ನು ತೆಗೆದಿರುವುದಿಲ್ಲ. ಸದರಿ ದಾನಪತ್ರದ ಕುರಿತು ನನಗೆ ಸತ್ಯನಾರಾಯಣರವರು ತಿಳಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ಸತ್ಯನಾರಾಯಣರವರಿಗೆ ಬೇರೊಬ್ಬರು ಸದರಿ ವಿಷಯವನ್ನು ತಿಳಿಸಿರುತ್ತಾರೆ. ಸದರಿ ವಿಷಯ ತಿಳಿದ ನಂತರ ನಾನಾಗಲೀ, ಸತ್ಯನಾರಯಣರಾಗಲೀ ಅಥವಾ ಪೂರ್ಣೇಶ್ ರವರಗಾಗಲೀ ದಾನಪತ್ರವನ್ನು ಪರಿಶೀಲಿಸಿರುವುದಿಲ್ಲ. ಸದರಿ ದಾನಪತ್ರದಲ್ಲಿ ಯಾವ ಅಂಶಗಳನ್ನು ನಮೂದಿಸಿರುತ್ತಾರೆ ಎಂದು ನನಗೆ ಸತ್ಯನಾರಯಣರಾಗಲೀ ಅಥವಾ ಪೂರ್ಣೇಶ್ ರವರಾಗಲೀ ತಿಳಿಸಿರುವುದಿಲ್ಲ. ದಾವ ಸ್ವತ್ತಿನ ಸ.ನಂ.74 ರಲ್ಲಿ ಒಟ್ಟು 1 ಎಕರೆ 18 ಗುಂಟೆ ವಿಸ್ತೀರ್ಣದಿಂದ ಕೂಡಿತ್ತು ಎಂದರೆ ಸರಿ. ಸದರಿ 1 ಎಕರೆ 18 ಗುಂಟೆ ಯಲ್ಲಿ ನನ್ನ ಎಲ್ಲಾ ಮಕ್ಕಳಿಗೂ ಪಾಲಿರುತ್ತದೆ ಎಂದರೆ ಸರಿ. ಸದರಿ 1 ಎಕರೆ 18 ಗುಂಟೆಯಲ್ಲಿ ನಾನು ಪ್ರತಿವಾದಿಗೆ ಕೇವಲ 18 ಗುಂಟೆಗೆ ಸಂಬಂಧಿಸಿದಂತೆ ದಾನಪತ್ರವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾನಪತ್ರ ಯಾವ ಸ್ವತ್ತಿಗೆ ಸಂಬಂಧಿಸಿದ್ದು ಎಂದು ನಾನು ಸತ್ಯನಾರಾಯಣರವರ ಬಳಿ ಕೇಳಿರುವುದಿಲ್ಲ.

ಸದರಿ ದಾನಪತ್ರವು ನೋಂದಣಿಯಾಗಿರುವುದಿಲ್ಲ. ಸತ್ಯನಾರಾಯಣರವರು ದಾನಪತ್ರದ ಯಾವುದೇ ನಕಲನ್ನು ನನಗೆ ತೋರಿಸಿರುವುದಿಲ್ಲ. ಸದರಿ ದಾನಪತ್ರದಲ್ಲಿ 18 ಗುಂಟೆ ಒಳಗೊಂಡಂತೆ ಒಂದು ಹಳೇ ಮನೆಯನ್ನು ಸಹಾ ದಾನವಾಗಿ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ 18 ಗುಂಟೆ ಸಂಬಂಧಿಸಿದಂತೆ ಪ್ರತಿವಾದಿಯವರ ಹೆಸರಿಗೆ ಖಾತೆಯಾಗಿರುತ್ತದೆ ಎಂಬ ವಿಷಯವನ್ನು ನನಗೆ ಯಾರು ತಿಳಿಸಿರುವುದಿಲ್ಲ. ಈ ದಾವವನ್ನು ಹೂಡಲು ನನಗೆ ಯಾರು ತಿಳಿಸಿರುವುದಿಲ್ಲ. ದಾವವನ್ನು ಹೂಡುವಾಗ ದಾವ ಪತ್ರದಲ್ಲಿ ರವೀಂದ್ರರವರು ನನಗೆ ಬೆದರಿಸಿದರು ಮತ್ತು ಹೆದರಿಸಿದರು ಎಂಬ ಕುರಿತ್ತು ನಮೂದಿಸಿರುವುದಿಲ್ಲ. ದಾನಪತ್ರ ಬರೆದ ವಿಷಯ ನನಗೆ ತಿಳಿದಿದ್ದರೂ ನಾನು ಸತ್ಯನಾರಾಯಣರವರ ಮಾತು ಕೇಳಿಕೊಂಡು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾನಪತ್ರದ ಯಾವುದೇ ನಕಲನ್ನು ನ್ಯಾಯಾಲಯದ ಮುಂದೆ ಹಾಜಮಾಡಿರುವುದಿಲ್ಲ.

ದಾವ ಸ್ವತ್ತಾದ ಸ.ನಂ.74/3 ಮತ್ತು 74/5 ರಲ್ಲಿರುವ 18 ಗುಂಟೆ ಜಮೀನಿನಲ್ಲಿ ಪ್ರತಿವಾದಿಯವರು ಮನೆಯನ್ನು ನಿರ್ಮಿಸಿಕೊಂಡು ವಾಸಿಸುತ್ತಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಖಾತೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಾದ 18 ಗುಂಟೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಮಾಡಿರುವುದಿಲ್ಲ. ನಾನು ಈ ನ್ಯಾಯಾಲಯದಲ್ಲಿ ದಾನಪತ್ರವನ್ನು ರದ್ದು ಕೋರಿ ಹೂಡಿರುವ 18 ಗುಂಟೆಯಲ್ಲಿ ಪ್ರತಿವಾದಿಯು ಮನೆಯೊಂದನ್ನು ನಿರ್ಮಿಸಿಕೊಂಡು ವಾಸಿಸುತ್ತಿರುತ್ತಾರೆ ಎಂದರೆ ಸರಿ. ನಾನು ದಾವೆಯನ್ನು ಹೂಡಿರುವ ಸ.ನಂ.74 ರಲ್ಲಿ ಒಟ್ಟು 1 ಎಕರೆ ವಿಸ್ತೀರ್ಣದ ಜಮೀನು ನನ್ನ ಹೆಸರಿನಲ್ಲಿ ಖಾತೆಯಾಗಿರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. ನನಗೆ ಪ್ರತಿವಾದಿಯು ಬೆದರಿಸಿರುವ ಕುರಿತು ಯಾವುದೇ ಕಚೇರಿಯಲ್ಲಿ ದೂರನ್ನು ನೀಡಿರುವುದಿಲ್ಲ. ನಾನು ಚಿಕ್ಕಮಗಳೂರಿನ ಉಪವಿಭಾಗಾಧಿಕಾರಿಯಾದ ಹಿರಿಯ ನಾಗರೀಕರ ಪೋಷಣಾ ಕೇಂದ್ರಕ್ಕೆ

ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದೂರು ದಿ.14.08.2023 ರಂದು ರದ್ದಾಗಿರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ.

ಸದರಿ ದೂರು ರದ್ದಾದ ನಂತರ ನಾನು ಚಿಕ್ಕಮಗಳೂರಿನ ತಂದೆತಾಯಿಯರ ಮತ್ತು ಹಿರಿಯ ನಾಗರೀಕರ ಪಾಲನೆ ಪೋಷಣೆ ಮತ್ತು ಕಲ್ಯಾಣ ಮೇಲ್ಮನವಿ ನ್ಯಾಯಮಂಡಳಿ, ಚಿಕ್ಕಮಗಳೂರು ಇವರ ಬಳಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದೂರಿನ ಕುರಿತು ನನ್ನ ಪರವಾಗಿ ನನ್ನ ವಕೀಲರು ಚಿಕ್ಕಮಗಳೂರಿನಲ್ಲಿ ಹಾಜರಾಗಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ ಮೇಲ್ಮನವಿಯು ಉಪವಿಭಾಗಾಧಿಕಾರಿ ಮತ್ತು ನನ್ನ ಮಕ್ಕಳ ವಿರುದ್ದ ಕುರಿತಾಗಿರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ ಜಿಲ್ಲಾಧಿಕಾರಿಯವರ ಕೆಳ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ ದಾನಪತ್ರವನ್ನು ಮಾಡುವ ಸಂದರ್ಭದಲ್ಲಿ ನಾನು ಯಾವುದೇ 11-E ಸ್ಕೆಚ್ ಗೆ ಸಹಿಯನ್ನು ಮಾಡಿರುವುದಿಲ್ಲ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ನನ್ನ ಮಗನಾದ ಸತ್ಯನಾರಾಯಣ ಬಿಟ್ಟು ಹೋಗಿರುತ್ತಾರೆ. ಸದರಿ ದಾನಪತ್ರವನ್ನು ನಾನೇ ಬರೆದುಕೊಟ್ಟಿದ್ದು ಪ್ರತಿವಾದಿಯವರಿಗೆ ತೊಂದರೆಯನ್ನುಂಟು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹೆಸರಿನಲ್ಲಿ ಇರುವ 1 ಎಕರೆ ಜಮೀನನ್ನು ನನ್ನ ಇತರ ಮಕ್ಕಳಿಗೆ ನೀಡಬಹುದು ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರಿಕೆಯಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಪ್ರಮಾಣಪತ್ರಿಕೆಯನ್ನು ಯಾರು ಬರೆದರು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಪ್ರಮಾಣಪತ್ರಿಕೆಯಲ್ಲಿ ಇರುವ ಅಂಶಗಳನ್ನು ಯಾರು ನನಗೆ ಓದಿ ತಿಳಿಸಿರುವುದಿಲ್ಲ. ನಾನಾಗಿಯೇ ಸ್ವತಃ ನನ್ನ ಮಗನಾದ ಪ್ರತಿವಾದಿಗೆ 18 ಗುಂಟೆಗೆ ಸಂಬಂಧಿಸಿದಂತೆ ದಾನಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರಿಕೆಯಲ್ಲಿ ಇರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಸದರಿ ದಾನಪತ್ರದ ವಿಷಯದ ಕುರಿತು ನಾನು ನನ್ನ ಕುಟುಂಬಸ್ಥರಿಗೆ ತಿಳಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು ನನ್ನ ಮಗನಾದ ಸತ್ಯನಾರಾಯಣ ರವರ ಜೊತೆ ಸೇರಿ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನನಗೆ ಮೂರು ಜನ ಮಕ್ಕಳು ಒಂದೇ ಸಮಾನ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.